# ಕಪ್ಪತ್ತಗುಡ್ಡ ಪರಿಸರದ ಸ್ಮಾರಕಶಿಲ್ಪಗಳು

**ಸರೋಜಿನಿ ನೀ. ಹೊಸಕೇರಿ**

ಇತಿಹಾಸ ಸಹ ಪ್ರಾಧ್ಯಾಪಕರು, ಸ. ಪ್ರ. ದ. ಕಾಲೇಜು, ಕಲಾದಗಿ, ತಾ. ಜಿ: ಬಾಗಲಕೋಟ.

DOI: https://doi.org/10.5281/zenodo.17296818

## ABSTRACT:

ಸ್ಮಾರಕಶಿಲ್ಪಗಳೆಂದರೆ ಹೆಸರೇ ಹೇಳುವಂತೆ ಯುದ್ಧದಲ್ಲಿ ಹೋರಾಡಿ ಮಡಿದವರ ಹಾಗೂ ಗತಿಸಿದವರ ಸ್ಮರಣೆಗಾಗಿ ನಿಲ್ಲಿಸಿರುವ ಶಿಲ್ಪಗಳಾಗಿವೆ. ಈ ಶಿಲ್ಪಗಳನ್ನು ಹಲವಾರು ಇತಿಹಾಸಕಾರರು ಗುರುತಿಸಿದ್ದಾರೆ. ಈ ಸ್ಮಾರಕಶಿಲ್ಪಗಳು ಹಲವಾರು ವಿಷಯ ವಸ್ತುಗಳ ಬಗ್ಗೆ, ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳ ಬಗೆಗೆ ತಿಳಿಸುತ್ತವೆ. ಒಬ್ಬ ವ್ಯಕ್ತಿ ಮರಣ ಹೊಂದಿದ ಮೇಲೆ ಸ್ವರ್ಗಕ್ಕೆ ಹೋಗುತ್ತಾನೆ ಎಂಬ ನಂಬಿಕೆ ಇರುವುದನ್ನು ಕಾಣಬಹುದು. ಸ್ಮಾರಕಶಿಲ್ಪಗಳು ಒಂದು ರೀತಿಯಲ್ಲಿ ಸ್ವರ್ಗ ಮತ್ತು ನರಕದ ಪರಿಕಲ್ಪನೆಗಳನ್ನು ಗಟ್ಟಿಗೊಳಿಸಿವೆ. ಹೀಗಾಗಿ ಮರಣ ಹೊಂದಿದ ವ್ಯಕ್ತಿಯು ಅವನ ಧರ್ಮಕ್ಕೆ ಸಂಬಂಧಿಸಿದ ದೇವರಿರುವಲ್ಲಿಗೆ ಹೋಗುತ್ತಾನೆ ಎಂಬ ಪರಿಕಲ್ಪನೆ ಇರುತ್ತಿತ್ತು. ಇದರಿಂದ ಸ್ವರ್ಗದ ಪರಿಕಲ್ಪನೆ ಅಂದಿನ ಜನರಲ್ಲಿ ಇತ್ತೆಂದು ನಮಗೆ ತಿಳಿದುಬರುತ್ತದೆ.

ಸ್ಮಾರಕ ಎಂಬ ಪದವು ಕಲೆ ಮತ್ತು ವಾಸ್ತುಶಿಲ್ಪ ಶಾಸ್ತ್ರದಲ್ಲಿ ಬಹು ಅರ್ಥಪೂರ್ಣವಾದ ಹಾಗೂ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಸ್ಮಾರಕ ಎಂಬ ಪದವು ಸ್ಮೃ+ಸ್ಮರಿಸು ಎಂಬ ಧಾತು ರೂಪವು, ಅಂದರೆ ಯಾವುದು ಸ್ಮರಣೆಗೆ ಬರುವಂತೆ ಮಾಡುತ್ತದೆಯೋ ಅದೇ ಸ್ಮಾರಕ ಎಂಬ ಪರಿಕಲ್ಪನೆ ಬರುತ್ತದೆ. ಶಿಲ್ಪ ಎನ್ನುವುದು ವಾಸ್ತುಶಿಲ್ಪದ ಒಂದು ವಿಭಾಗವಾಗಿದ್ದು, ಅದರ ಉಪವಿಭಾಗವೇ ಈ ಸ್ಮಾರಕಶಿಲ್ಪಗಳಾಗಿವೆ. ಸ್ಮಾರಕಶಿಲ್ಪ ಎಂಬ ಪದವು Memorial Stone ಎಂಬ ಆಂಗ್ಲ ಭಾಷಾರೂಪವಾಗಿದ್ದು, Memorial ಎಂದರೆ ಸ್ಮರಣೆ, Stone ಎಂದರೆ ಶಿಲೆ ಎಂಬ ಅರ್ಥವನ್ನು ನೀಡುವುದು. ಅಂದರೆ ಯಾವುದೇ ವ್ಯಕ್ತಿಯ ಸ್ಮರಣೆಗಾಗಿ ನಿಲ್ಲಿಸಿದ ಶಿಲೆಗಳನ್ನು ಸ್ಮಾರಕಶಿಲ್ಪಗಳು ಎಂದು ಕರೆಯುವರು. ಅವುಗಳು ಕಟ್ಟಡ, ಸ್ತಂಭಗಳು, ಶಾಸನ, ಯಾವುದೇ ರೂಪದಲ್ಲಿಯೂ ಇರಬಹುದು. ಒಟ್ಟಾರೆಯಾಗಿ ಹೇಳುವುದಾದರೆ ಯಾವುದೇ ಒಂದು ಸನ್ನಿವೇಶದಲ್ಲಿ ಅಥವಾ ಘಟನೆಯಲ್ಲಿ ಮಡಿದ ಹಾಗೂ ಗತಿಸಿದವರ ನೆನಪಿಗಾಗಿ ಹಾಕಿಸುವ ಶಿಲ್ಪಗಳನ್ನು ಸ್ಮಾರಕಶಿಲ್ಪಗಳೆಂದು ಹೇಳಬಹುದು. ಯುದ್ಧದಲ್ಲಿ ಮರಣಿಸಿದ ವ್ಯಕ್ತಿಯನ್ನು ದೈವತ್ವ ಕ್ಕೇರಿಸಿ ಅವರನ್ನು ಗೌರವಿಸುವ ರೂಪದಲ್ಲಿ ಈ ಸ್ಮಾರಕಗಳನ್ನು ಇಡುವ ಕಲೆ ಬೆಳೆಯಿತು. ಇವುಗಳೇ ಮುಂದೆ ಸ್ಮಾರಕಶಿಲ್ಪಗಳಾಗಿ ರೂಪುಗೊಂಡವು.

## KEYWORDS:

ಗೋಗ್ರಹಣ, ಮಾಸ್ತಿಗಲ್ಲು, ಪಾಣಿಪೀಠ, ಶಿಲ್ಪ, ಸ್ತಂಭಗಳು.

### ಕಪ್ಪತ್ತಗುಡ್ಡ ಪರಿಸರದ ಸ್ಮಾರಕಶಿಲ್ಪಗಳು:

ಈ ಸ್ಮಾರಕಶಿಲ್ಪಗಳಲ್ಲಿ ಅನೇಕ ವಿಧಗಳಿವೆ. ಅವುಗಳನ್ನು ವೀರಗಲ್ಲುಗಳು, ಮಾಸ್ತಿಕಲ್ಲು, ನಿಷಿದಿಕಲ್ಲು, ಲೌಕಿಕ ಹಾಗೂ ಧಾರ್ಮಿಕ ಆತ್ಮಬಲಿದಾನದ ಕಲ್ಲುಗಳೆಂದು ಗುರುತಿಸಲಾಗಿದೆ. ಇವು ಗದಗ ಜಿಲ್ಲೆಯಾದ್ಯಂತ ವ್ಯಾಪಿಸಿದ್ದು ಈ ಪ್ರದೇಶದಲ್ಲಿ ಸ್ಮಾರಕ ಶಿಲ್ಪಗಳ ಕುರಿತಂತೆ ನಂಬಿಕೆ ಹಾಗೂ ಆಚರಣೆಗಳು ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಇದೇ ರೀತಿಯಾಗಿ ಕಪ್ಪತ್ತಗುಡ್ಡ ಪರಿಸರದಲ್ಲಿ ದೊರೆತಿರುವ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣವಾಗಿರುವ ಸ್ಮಾರಕಶಿಲ್ಪಗಳ ಅಧ್ಯಯನದ ಅವಶ್ಯಕತೆ ಇಲ್ಲಿ ಮುಖ್ಯವಾಗಿದೆ. ಈ ಪರಿಸರದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು

ಹೀಗೆ ಹಲವಾರು ರಾಜಮನೆತನಗಳು ಆಳ್ವಿಕೆಯನ್ನು ಮಾಡಿ ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಸ್ಮಾರಕಗಳನ್ನು ನಿರ್ಮಿಸಿ ಅವುಗಳಿಗೆ ದಾನದತ್ತಿಗಳನ್ನು ನೀಡುವ ಮುಖೇನ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಂತ ಕೊಡುಗೆಗಳನ್ನು ನೀಡಿದ್ದಾರೆ. ಬಾದಾಮಿ ಚಾಲುಕ್ಯರ ಅವಸಾನದ ನಂತರ ಆಡಳಿತವನ್ನು ನಡೆಸಿದವರು ರಾಷ್ಟ್ರಕೂಟರು. ಇವರ ದೊರೆ ಒಂದನೇ ಅಮೋಘವರ್ಷನ ಬೆಂತೂರಿನಲ್ಲಿ ದೊರೆತಿರುವ ವೀರಗಲ್ಲಿನಲ್ಲಿ ಚಿಕ್ಕಣನೆಂಬ ವೀರನ ಮರಣದ ವಿವರವನ್ನು ಕಾಣಬಹುದು. ಇವನ ಕಾಲದ ಮತ್ತೊಂದು ವೀರಗಲ್ಲು ಮೇವುಂಡಿಯಲ್ಲಿದೆ. ಈ ಸ್ಮಾರಕ ಶಾಸನದಲ್ಲಿ ಕಪ್ಪೆಯರಸನ ಸೇವಕನಾದ ಅಣ್ಣುಗ ರೆಟ್ಟಿಯಣ್ಣನ ಮರಣದ ಕುರಿತು ಉಲ್ಲೇಖಿಸಲಾಗಿದೆ. ಎರಡನೇ ಕೃಷ್ಣನ ಆಳ್ವಿಕೆಯ ಕಾಲದ ಕ್ರಿ. ಶ. 897ರ ಶಾಸನದಲ್ಲಿ 56 ಮಹಾಜನರ ಸಮ್ಮುಖದಲ್ಲಿ ವೀರಗಲ್ಲು ನಿಲ್ಲಿಸಿದ ಉಲ್ಲೇಖವಿದೆ. ಗದಗ ತಾಲ್ಲೂಕಿನ ಶಿರುಂಜದಲ್ಲಿ ದೊರೆತ ಶಾಸನದಲ್ಲಿ ಕಿಡಲೇನಾಡಿಗೆ ಅಧಿಪತಿಯಾದ ಎರೆಯಮ್ಮನು ತುರುಗಾಳದಲ್ಲಿ ಹೋರಾಡಿ ಮರಣ ಹೊಂದಿದಾಗ ಗಾವುಂಡನಾದ ಬುತೇಂದ್ರನು ವೀರಗಲ್ಲನ್ನು ಹಾಕಿಸಿದ ವಿಷಯ ತಿಳಿಯುತ್ತದೆ. ಎಲೆಶಿರೂರು ವೀರಗಲ್ಲು ಶಾಸನದಲ್ಲಿ ಮಹಾ ಶ್ರೀಮಂತನು ಬೆಳವಲ ನಾಡನ್ನು ಆಳುತ್ತಿದ್ದ ವಿವರ ದೊರೆಯುತ್ತದೆ. 4ನೇ ಗೋವಿಂದನ ಕಾಲದ ಸೊರಟೂರು ಶಾಸನವು ಗೋವಿಂದವಲ್ಲಭನ ಆಳ್ವಿಕೆಯಲ್ಲಿ ಸಾಂತರನು ಬನವಾಸಿಯನ್ನು ಆಳುತ್ತಿದ್ದಾಗ ವ್ಯಕ್ತಿಯೋರ್ವನ ಮರಣದ ಬಗ್ಗೆ ಉಲ್ಲೇಖಿಸಿದೆ. ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ಕೇವಲ ಸ್ಮಾರಕ ಶಾಸನಗಳು ಅಷ್ಟೇ ಅಲ್ಲದೇ ಅನೇಕ ಸ್ಮಾರಕಶಿಲ್ಪಗಳು ಈ ಪರಿಸರದಲ್ಲಿ ಕಂಡುಬಂದಿವೆ. ಇದರಿಂದ ಇವರ ಕಾಲದಲ್ಲಿ ವೀರರಿಗೆ ಹಾಗೂ ವೀರಮರಣಕ್ಕೆ ಹೆಚ್ಚು ಮಹತ್ವವಿತ್ತು ಎಂಬುದು ಗಮನಿಸಬಹುದು. ದುಷ್ಟ, ಮೃಗಗಳ ಜೊತೆ ಹೋರಾಟ, ಗೋಗ್ರಹಣ, ಕೋಟೆಕಾಳಗ, ಸೀಮಾ ಸಂಬಂಧದ ಹೋರಾಟ, ಎತ್ತಿನ ಎಣ್ಣೆಗಾಣ, ಊರಳಿವು ಮುಂತಾದ ವೀರಗಲ್ಲುಗಳು ಇರುವ ಕಾಲದ್ದಾಗಿದ್ದು ರಾಜಕೀಯ ಅಂಶಗಳನ್ನು ನೀಡುತ್ತವೆ.

ಕ್ರಿ. ಶ. 1190ರಲ್ಲಿ ಬಿಲ್ಲಮನಿಗೂ ಮತ್ತು ಹೊಯ್ಸಳ ಬಲ್ಲಾಳನಿಗೂ ಸೊರಟೂರಿನಲ್ಲಿ ಯುದ್ಧನಡೆದು ಯಾದವರ ದೊರೆ ಬಿಲ್ಲಮನು ಸೋತು ಹೊಯ್ಸಳರ ದೊರೆ ಬಲ್ಲಾಳನ ಕೈಸೆರೆಯಾದನು. ಈ ಸೊರಟೂರು ಕಾಳಗದಿಂದ ಹೊಯ್ಸಳರ ಸೈನಿಕ ಶಕ್ತಿಯ ಪ್ರದರ್ಶನವಾಯಿತು. ಮುಂದೆ ಹೊಯ್ಸಳರು ಸೇವುಣರನ್ನು ಲಕ್ಕುಂಡಿಯವರೆಗೂ ಬೆನ್ನಟ್ಟಿದರು. ಈ ಯುದ್ಧದಿಂದಾಗಿ ಸೊರಟೂರಿನ ಭಾಗದಲ್ಲಿ ಅನೇಕ ವೀರಗಲ್ಲುಗಳು ದೊರೆತಿರುವುದನ್ನು ಕಾಣಬಹುದಾಗಿದೆ. ಕ್ರಿ. ಶ. 1287ರ ಡಂಬಳದ ಶಾಸನದಲ್ಲಿ ರಾಮದೇವನ ಆಳ್ವಿಕೆಯ ಕಾಲದಲ್ಲಿ 3ನೇ ಶಿಂಗನಾಯಕರ ಕಾಳಗದಲ್ಲಿ ದಾಮೇನಾಯಕರು ವೀರಮರಣ ಹೊಂದಿದ ಉಲ್ಲೇಖ ಸಿಗುತ್ತದೆ.

ಕ್ರಿ. ಶ. 1407ರ ಕಣವಿಯಲ್ಲಿರುವ ಕೇಲಾರಿಸಾಯಿ ನಾಯಕನ ಮತ್ತು ಮಗ ದೇವನಾಯಕನ ಮತ್ತು ಆತನ ಹೆಂಡತಿಯರಾದ ನಾಗಾಯಿ, ದೇವಾಯಿಯವರು ಮಹಾಸತಿಯರಾದ ವಿಷಯವನ್ನು ತಿಳಿಸುತ್ತದೆ. ಇದು ಎರಡನೇ ಹರಿಹರನ ಕಾಲಾವಧಿಯಲ್ಲಿ ನಡೆದ ಘಟನೆಯಾಗಿದೆ. ವೀರಗಲ್ಲುಗಳಾದ ವೀರನ ಬಗೆಗೆ ಗೌರವ ಹಾಗೂ ವೀರತನಕ್ಕೆ ಅವನ ಕುಟುಂಬದವರು, ಸಂಬಂಧಿಕರು ಮತ್ತು ಗ್ರಾಮದ ಮುಖ್ಯಸ್ಥರು ಯಾವ ರೀತಿಯ ಮನೋಧೋರಣೆ ಹೊಂದಿದ್ದ ರೆಂದು ತಿಳಿಯುತ್ತದೆ. 10ನೇ ಶತಮಾನದ್ದೆಂದು ಹೇಳುವ ಹೊಸೂರಿನ ಈಶ್ವರ ದೇವಾಲಯದ ಹತ್ತಿರ ಬರುವ ಯುದ್ಧ ವೀರಗಲ್ಲು ದೊರೆತಿದ್ದು ಇದರಲ್ಲಿ ವೀರನು ವೈರಿಯ ಎದೆ ಸೀಳಿ ರಕ್ತ ಕುಡಿದನೆಂಬ ಉಲ್ಲೇಖವಿದೆ.

13ನೇ ಶತಮಾನದ್ದೆಂದು ತೋರುವ ಸೊರಟೂರಿನ 3 ದೇವಾಲಯದ ಹತ್ತಿರ ಬರುವ ಯುದ್ಧ ವೀರಗಲ್ಲು ದೊರೆತಿದ್ದು ಇದು ಬಲ್ಲಾಳು ಹರಿಸೇನಾನಾಯಕನ ಮರಣದ ಕುರಿತು ಉಲ್ಲೇಖಿಸುತ್ತದೆ. ಕಣವಿ ಗ್ರಾಮದ ಚಾವಡಿ ಹತ್ತಿರ 13ನೇ ಶತಮಾನದ ಯುದ್ಧ ವೀರಗಲ್ಲೊಂದು ದೊರೆತಿದ್ದು ಇದು ಚೌಡೇನಾಯಕನ ಮಗ ದೇವೆನಾಯಕನ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ. ಶ. 1407ರ ಹರಿಹರನ ಮಾಸ್ತಿಗಲ್ಲು ಕಣವಿ ಗ್ರಾಮದ ಮೈಲಾರಲಿಂಗಪ್ಪನ ದೇವಾಲಯದ ಹತ್ತಿರ ದೊರೆತಿದೆ. ಇದು ನಾಗಾಯಿ ದೇಮಾಯಿಯರ ಸಹಗಮನದ ಉಲ್ಲೇಖ ನೀಡುತ್ತದೆ. 10ನೇ ಶತಮಾನದ್ದೆಂದು ಹೇಳುವ ಹೊಸೂರು ಗ್ರಾಮದ ಮಸೀದಿಯ ಹತ್ತಿರ ವೀರಗಲ್ಲೊಂದು ದೊರೆತಿದೆ. ಇದು ವೀರನ ಮರಣದ ಕುರಿತು ಉಲ್ಲೇಖಿಸುತ್ತದೆ.

15ನೇ ಶತಮಾನಕ್ಕೆ ಸಂಬಂಧಿಸಿದಂತೆ ಉರಿ ಉಯ್ಯಾಲೆ ಕಂಬವು ಡೋಣಿ ಗ್ರಾಮದ ಡೋಣಿಕವ್ವನ ದೇವಾಲಯದ ಮುಂದೆ ದೊರೆತಿದೆ. ಇದರಿಂದ ದೇವರ ಜಾತ್ರೆಯ ಸಂದರ್ಭದಲ್ಲಿ ಉರಿ ಉಯ್ಯಾಲೆಯ ಮೂಲಕ ಆತ್ಮಬಲಿದಾನ ನಡೆಯುತ್ತಿತ್ತು ಎಂಬುದು ತಿಳಿಯುತ್ತದೆ. ಹೊಸೂರು ಗ್ರಾಮದ ಕಲ್ಮೇಶ್ವರ ದೇವಾಲಯದ ಮುಂದೆ ಹುಲಿ ಬೇಟೆಯ ವೀರಗಲ್ಲು ದೊರೆತಿದೆ. ಇದು ಮಲ್ಲಿದೇವನ ಮೊಮ್ಮಕ್ಕಳಾದ ಬೊಮ್ಮಯ್ಯ, ಮಲ್ಲಯ್ಯ, ಬರಮ ಹಾಗೂ ಮತ್ತೊಬ್ಬನ ಜೊತೆಗೂಡಿ ಕಾಡಿನಲ್ಲಿ ಹುಲಿಯೊಂದಿಗೆ ಹೋರಾಡಿದರು ಎಂಬುದು ಉಲ್ಲೇಖವಾಗಿದೆ. ಹೊಸೂರು ಗ್ರಾಮದ ತ್ರಿಕೂಟೇಶ್ವರ ದೇವಾಲಯದ ಎದುರಿಗೆ ವೀರಗಲ್ಲೊಂದು ದೊರೆತಿದ್ದು ಇದರಿಂದ ಹೊಲ ಬಿತ್ತುವ ಸಂದರ್ಭದಲ್ಲಿ ವೀರತನವನ್ನು ಮೆರೆದ ವಿವರಣೆ ಕಂಡುಬಂದಿದೆ.

ಲಕ್ಕುಂಡಿಯ ವಸ್ತುಸಂಗ್ರಹಾಲಯದ ಹಿಂದಿರುವ ಶಾಸನವುಳ್ಳ ವೀರಗಲ್ಲು ಸು. ಕ್ರಿ. ಶ. 10ನೇ ಶತಮಾನದ ಹೊಸೂರು ಗ್ರಾಮದ ವೀರಗಲ್ಲಿನಲ್ಲಿ ಈ ರೀತಿ ವೀರನ ಮರಣದ ಉಲ್ಲೇಖವಿದೆ. ಮೇಲಿನ ಭಾಗ ಒಡೆದಿದೆ. ಕೆಳಹಂತದಲ್ಲಿ ವೀರನು ವೈರಿಗಳ ವಿರುದ್ಧ ಹೋರಾಡುತ್ತ ನಿಂತಿದ್ದಾನೆ. ಅದಕ್ಕಾಗಿ ಬಿಲ್ಲನ್ನು ವೈರಿಗಳ ಮುಂದಕ್ಕೆ ಹಿಡಿದಿದ್ದಾನೆ. ಅವನಿಗೆ ಸಾಲಾಗಿ ಬಾಣಗಳು ನೆಟ್ಟಿವೆ. ವೈರಿಗಳನ್ನು ಎರಡು ಸಾಲುಗಳಲ್ಲಿ ಕ್ರಮವಾಗಿ ಇಬ್ಬರು ಮಹಿಳೆಯರು ಮತ್ತು ಒಬ್ಬ ಅರೆಬೆತ್ತಲೆ ಮಹಿಳೆ ಮತ್ತು ಬತ್ತಳಿಕೆಗಳನ್ನು ಎತ್ತಿ ಹಿಡಿದು ನಿಂತ ಇಬ್ಬರು ವೀರನ ಕಡೆಯವರಿದ್ದಾರೆ. ಮಹಿಳೆಯರ ಮಾನಭಂಗವನ್ನು ವೀರನು ರಕ್ಷಿಸಿದಂತೆ ಕಾಣುತ್ತದೆ. ವೀರನ ಕಾಲಿನ ಮುಂದೆ ಒಬ್ಬನು ಶರಣಾಗತನಾಗಿ ಕೈಮುಗಿದಿದ್ದಾನೆ. ವಸ್ತ್ರಾಭರಣ ಧರಿಸಿದ್ದಾನೆ. ಅದರ ಶಾಸನದಲ್ಲಿ ವೀರನು ವೈರಿಗಳಿಂದ ತುರುಗಳನ್ನು ಮತ್ತು ಮಹಿಳೆಯರನ್ನು ರಕ್ಷಿಸಿದನೆನ್ನಲಾಗಿದೆ. ಮೇಲಿನ ಮುರಿದ ಭಾಗದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಲೋಕಕ್ಕೆ ಒಯ್ಯುತ್ತಿರುವುದನ್ನು ಕಾಣಬಹುದು.

ಹೊಸೂರಿನ ಮತ್ತೊಂದು ವೀರಗಲ್ಲಿನಲ್ಲಿ ವೀರನು ವೈರಿಯ ಎದೆಗೆ ಕತ್ತಿಯಿಂದ ಇರಿದಿದ್ದಾನೆ. ಅವನು ನೆಲಕ್ಕೆ ಕುಸಿಯುತ್ತಿರುವಂತೆ ಚಿತ್ರಿಸಲಾಗಿದೆ. ಇದನ್ನು ನೋಡಿದ ವೈರಿಯ ಪರಿವಾರದವರು ಹಿಂದಕ್ಕೆ ಓಡುತ್ತಲಿರುವರು. ಆದರೆ ಇಬ್ಬರು ವೀರನಿಗೆ ಬಿಲ್ಲಿನಿಂದ ಬಾಣ ಪ್ರಯೋಗಿಸುತ್ತಿರುವರು. ಅವರ ಬಾಣಗಳನ್ನು ನಿಯಂತ್ರಿಸಲು ವೀರ ಪರಿವಾರದವನೊಬ್ಬ ತನ್ನ ತಲೆಯನ್ನು ಅಡ್ಡ ಹಿಡಿದಿದ್ದಾನೆ. ವೀರ ತನ್ನ ಬಿಲ್ಲನ್ನು ಎಡಗೈಯಿಂದ ಎದುರು ಎತ್ತಿ ಹಿಡಿದಿರುವನು. ಒಬ್ಬನು ಪ್ರಾಣ ರಕ್ಷಣೆಗಾಗಿ ಕೈಮುಗಿದು ವೀರನ ಮುಂದೆ ನಿಂತಿದ್ದಾನೆ. ವೀರನ ತಲೆಯ ಮೇಲೆ ಛತ್ರಿಯನ್ನು ಹಿಡಿದಿರುವುದರಿಂದ ಅವನೊಬ್ಬ ಅಧಿಕಾರಿವರ್ಗದವನೆಂದು ತಿಳಿಯುವುದು. ಅವನ ಹಿಂದೆ ಒಬ್ಬ ಕುದುರೆ ಸವಾರ ಮತ್ತು ಇಬ್ಬರು ಕಾಲ್ದಳದವರು ಬಿಲ್ಲನ್ನು ಹಿಡಿದು ನಿಂತಿದ್ದಾರೆ. ವೀರನು ತನ್ನ ತುರುಬನ್ನು ತಲೆಯ

ಹಿಂದಕ್ಕೆ ಕಟ್ಟಿದ್ದಾನೆ. ಕುಂಡಲ, ಸರ, ಬಳೆ, ಕಡಗ ಆಭರಣಗಳನ್ನು ಮತ್ತು ಮಂಡಿಯವರೆಗೆ ಇಳಿಬಿಟ್ಟ ಪಂಚೆಯನ್ನು ಸೊಂಟಕ್ಕೆ ಕಟ್ಟಿದ್ದಾನೆ. ಸ್ವರ್ಗಾರೋಹಣದಲ್ಲಿ ವಿಮಾನದಲ್ಲಿ ಮಡಿದ ವೀರ ಕೈಮುಗಿದು ಕುಳಿತಿದ್ದಾನೆ. ಈ ವಿಮಾನದ ಕಂಬಗಳ ಮಧ್ಯೆ ಪಟ್ಟಿಗಳಿವೆ. ಆ ಪಟ್ಟಿಗಳನ್ನು ಅಪ್ಸರೆಯರಿಬ್ಬರು ಹಿಡಿದು ಒಯ್ಯುತ್ತಿರುವರು. ವಿಮಾನದ ಶಿಖರಕ್ಕೆ ಮೂರು ಸ್ತರಗಳಿವೆ. ಅದರ ಬದಿಗಳಲ್ಲಿ ಎರಡೆರಡು ಕಮಲದ ಹೂವಿನ ಚಿತ್ರಗಳಿವೆ. ಮಡಿದ ವೀರನು ಕೈಮುಗಿದು ಸ್ವರ್ಗದಲ್ಲಿ ಕುಳಿತಿರುವನು. ಯತಿಯು ಎಡಗೈಯಲ್ಲಿ ಆರತಿಯನ್ನು, ಬಲಗೈಯಲ್ಲಿ ಗಂಟೆ ಹಿಡಿದು ಶಿವಲಿಂಗದ ಮುಂದೆ ನಿಂತು ಆರಾಧಿಸುತ್ತಿರುವನು. ಆತನು ತನ್ನ ಜಡೆಯನ್ನು ತಲೆಯ ಮೇಲೆ ರುಮಾಲಿನಂತೆ ಕಟ್ಟಿದ್ದಾನೆ. ಶಿವಲಿಂಗದ ತಲೆಗೆ ಇಲ್ಲಿಯೂ ರುದ್ರಾಕ್ಷಿ ಸರಗಳನ್ನು ಸುತ್ತಲಾಗಿದೆ. ಶಿವಲಿಂಗದ ಪೀಠಭಾಗಗಳ ಎಡಗಡೆ ಶಿವಲಿಂಗಕ್ಕೆ ಮುಖ ಮಾಡಿ ನಂದಿಯು ತನ್ನ ಬಲಗಾಲನ್ನು ಮುಂದೆ ಚಾಚಿಕೊಂಡು ಕುಳಿತಿದೆ. ಶಿವಲಿಂಗದ ಮೇಲೆ ಇಳಿಬಿಟ್ಟ ಗಂಟೆ / ಹೂಗೊಂಚಲಿದೆ. ಬದಿಗಳಲ್ಲಿ ಸೂರ್ಯ ಮತ್ತು ಚಂದ್ರರಿದ್ದಾರೆ. ಮೇಲ್ಭಾಗ ಅರ್ಧವೃತ್ತಾಕಾರದಲ್ಲಿದೆ.

ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದೆಂದು ಹೇಳುವ ಯುದ್ಧ ವೀರಗಲ್ಲೊಂದು ಕಣವಿ ಗ್ರಾಮದ ವೆಂಕಪ್ಪಜ್ಜನ ಗುಡಿ ಮುಂದೆ ದೊರೆತಿದೆ. ಈ ವೀರಗಲ್ಲಿನಲ್ಲಿ ವೀರನು ಕುದುರೆ ಸವಾರಿ ಮಾಡುತ್ತ ಎದುರಿಗೆ ನಿಂತ ಮೂವರು ವೈರಿಗಳಿಗೆ ಈಟಿಯಿಂದ ತಿವಿಯಲು ಮೇಲೆತ್ತಿ ಹಿಡಿದಿದ್ದಾನೆ. ಇನ್ನುಳಿದ ವಿವರಗಳು ಸಾಮಾನ್ಯ ಲಕ್ಷಣದ್ದಾಗಿವೆ. ಈ ವೀರಗಲ್ಲಿನಲ್ಲಿರುವ ಶಿವಲಿಂಗದ ತಳ ಮತ್ತು ಮೇಲಿನ ಪಾಣಿಪೀಠ ಭಾಗವು ವೃತ್ತಾಕಾರವಾಗಿದೆ. ಎಡಕ್ಕೆ ಜಲಧಾರೆಯಿದೆ. ಹೋರಾಟ ವಿಮಾನದಲ್ಲಿ ಕುಳಿತ ಮಡಿದ ವೀರನನ್ನು ಅಪ್ಸರೆಯರು ಒಯ್ಯುವುದು ಮತ್ತು ಮಡಿದ ವೀರ, ಯತಿ, ಶಿವಲಿಂಗ ಆರಾಧಿಸುತ್ತಿರುವುದು ಮತ್ತು ಕುಳಿತ ನಂದಿ ಇವು ಸಾಮಾನ್ಯ ಲಕ್ಷಣವಾಗಿವೆ.

ಡೋಣಿಯ ಸಿದ್ದೇಶ್ವರ ದೇವಾಲಯದ ಬಲಭಾಗದಲ್ಲಿ ದಕ್ಷಿಣಾಭಿಮುಖವಾಗಿರುವ ಈ ವೀರಗಲ್ಲಿನಲ್ಲಿ ವೀರನೊಬ್ಬ ಹುಲಿಯನ್ನು ಬಿಲ್ಲಿನಿಂದ ಬೇಟೆ ಆಡುತ್ತಿರುವನು. ಹುಲಿಯ ತಲೆಗೆ ಬಾಣವನ್ನು ಪ್ರಯೋಗಿಸುತ್ತಾ ನಿಂತಿದ್ದಾನೆ. ಹುಲಿಯು ಬಾಯಿ ತೆರೆದು ಅವನ ಎದುರಾಗಿ ನಿಂತಿದೆ. ವೀರ ಮತ್ತು ಹುಲಿಯ ಬದಿಗಳಲ್ಲಿ ಎತ್ತರದ ಐದು ಈಚಲ ಅಥವಾ ತೆಂಗಿನ ಮರಗಳಿವೆ. ಕಾಡನ್ನು ಹೊಂದಿರುವ ಡೋಣಿ ಪ್ರದೇಶದಲ್ಲಿ ಈಚಲ ಮರಗಳು ಇಂದಿಗೂ ಇರುವುದನ್ನು ಇಲ್ಲಿ ನೋಡಬಹುದು. ಮಡಿದ ವೀರನನ್ನು ಅಪ್ಸರೆಯರು ಹಿಡಿದುಕೊಂಡು ಹಾರುತ್ತಿರುವರು. ಮೇಲಿನ ಭಾಗದಲ್ಲಿ ವೀರ ಕೈಮುಗಿದು ಶಿವಲಿಂಗದ ಮುಂದೆ ನಿಂತಿದ್ದಾನೆ. ಶಿವಲಿಂಗಕ್ಕೆ ಆಯತಾಕಾರದ ಮೂರು ಪಾಣಿಪೀಠಗಳಿವೆ. ಎಡಗಡೆಗೆ ಯತಿ ನಿಂತು ಶಿವಲಿಂಗವನ್ನು ಆರಾಧಿಸುತ್ತಿರುವನು. ಶಿಲ್ಪದ ಮೇಲ್ಭಾಗದಲ್ಲಿ ಕಳಶವಿದೆ. ಈ ಶಿಲ್ಪದಲ್ಲಿ ವೀರ ಹುಲಿ ಬೇಟೆ ಆಡಿ ಪ್ರಾಣ ಕಳೆದುಕೊಂಡಿರುವುದು ತಿಳಿಯುತ್ತದೆ.

ಸೊರಟೂರಿನ ಶಿಲ್ಪದಲ್ಲಿ ಮೂರು ಹಂತಗಳಿವೆ. ಮಧ್ಯದಲ್ಲಿ ಪ್ರತ್ಯೇಕಿಸಲು ಪಟ್ಟಿಕೆಗಳಿವೆ. ಕೆಳಹಂತದಲ್ಲಿ ಕುದುರೆ ಸವಾರಿ ಮಾಡುವ ವೀರನನ್ನು ವೈರಿ ಪಡೆಯ ಇಬ್ಬರು ಆತನ ವಿರುದ್ಧ ಹೋರಾಡುತ್ತ ನಿಂತಿದ್ದಾರೆ. ಒಬ್ಬನು ಆತನ ಕುದುರೆಗೆ ಬಿಲ್ಲಿನಿಂದ ಬಾಣವನ್ನು ಪ್ರಯೋಗಿಸುತ್ತಿರುವನು. ಹೆಗಲಿಗೆ ಬತ್ತಳಿಕೆಯನ್ನು ಕಟ್ಟಿದ್ದಾನೆ. ವೀರನು ಈಟಿಯಿಂದ ವೈರಿಯ ಬಿಲ್ಲಿಗೆ ಚುಚ್ಚಿದ್ದಾನೆ. ಎರಡನೇ ಹಂತದಲ್ಲಿ ಮತ್ತೊಬ್ಬ ವೀರನು ಅವನ ವಿರುದ್ಧ ಹೋರಾಡಲು ನಿಂತಿದ್ದಾನೆ. ಮೇಲಿನ ಹಂತದಲ್ಲಿ ಸಾಲಾಗಿ ಮೂವರು ನಿಂತಿದ್ದಾರೆ. ಅವರ ಮೇಲ್ಗಡೆ ಕೀರ್ತಿ ಮುಖವಿದೆ.

ಡೋಣಿ ಸಮೀಪದ ನಂದಿವಾರಿ ಮಠದ ಬಳಿ ಇರುವ ಶಿಲ್ಪದಲ್ಲಿ ಪಿಸ್ತೂಲನ್ನು ವೀರ ವೈರಿಯ ವಿರುದ್ಧ ಹಿಡಿದು ನಿಂತಿರುವನು. ಒಬ್ಬನು ತನ್ನನ್ನು ಕ್ಷಮಿಸಲು ಕೇಳಿಕೊಳ್ಳುತ್ತಿರುವನು. ಬದಿಯಲ್ಲಿ ಸೇವಕ ನಿಂತಿದ್ದಾನೆ. ಉಳಿದ ಭಾಗದಲ್ಲಿ ಅಪ್ಸರೆಯರು ಕುಳಿತಿರುವ ಮಡಿದ ವೀರನ ಬದಿಗಳಲ್ಲಿ ನಿಂತಿದ್ದಾರೆ. ಗುಮ್ಮಗೋಳ ವೀರಗಲ್ಲಿನಲ್ಲಿ ಕೆಳಹಂತದಲ್ಲಿ ಬಲಗಡೆಗೆ ಹಸುಗಳನ್ನು ಚಿತ್ರಿಸಲಾಗಿದೆ. ವೀರನು ವೈರಿಯ ವಿರುದ್ಧ ಹೋರಾಡುತ್ತ ನಿಂತಿದ್ದಾನೆ. ಇಬ್ಬರು ಬಿಲ್ಲುಗಳನ್ನು ಎದುರುಬದುರಾಗಿ ಹಿಡಿದಿದ್ದಾರೆ. ವೀರನ ಇನ್ನೊಂದು ಕೈಯಲ್ಲಿ ಬಾಗಿದ ಕತ್ತಿಯಿದೆ. ವೈರಿ ಬಾಣ ಪ್ರಯೋಗಿಸುತ್ತಿರುವನು. ಅವರು ಮುಡಿಗಳನ್ನು ತಲೆಯ ಮೇಲೆ ಕಟ್ಟಿದ್ದಾರೆ. ಉಳಿದೆರಡು ಹಂತಗಳಲ್ಲಿ ಸಾಮಾನ್ಯ ಅಂಶಗಳಿವೆ. ಮುಂಡರಗಿ ಭಾಗದ ಒಂದು ವೀರಗಲ್ಲಿನಲ್ಲಿ ಅಪ್ಸರೆಯರಿಬ್ಬರು ಮಡಿದ ವೀರನ ಕೈಗಳನ್ನು ತಮ್ಮ ಭುಜಗಳ ಮೇಲಿಟ್ಟುಕೊಂಡು ಒಯ್ಯುತ್ತಿರುವರು. ವೀರನ ತಲೆಯ ಮೇಲೆ ಎರಡು ಬದಿಗಳಲ್ಲಿ ಎರಡು ಛತ್ರಿಗಳಿರುವುದು ಗಮನೀಯ. ಹೋರಾಟ ದೃಶ್ಯವಿಲ್ಲ. ಅದರ ಮೇಲ್ಗಡೆ ಭಾಗ ಒಡೆದಿದ್ದು ಉಳಿದ ಭಾಗದಲ್ಲಿ ಶಿವಲಿಂಗ, ಮಡಿದ ವೀರರಿದ್ದಾರೆ.

ಈ ಭಾಗದಲ್ಲಿ ದೊರೆತ ವೀರಗಲ್ಲುಗಳಲ್ಲಿ ಸಾಮಾನ್ಯವಾದ ಹಂತಗಳಲ್ಲಿದ್ದು, ಹೋರಾಟದ ದೃಶ್ಯ, ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಅಪ್ಸರೆಯರು ಒಯ್ಯುವ ದೃಶ್ಯ ಮತ್ತು ಮಡಿದ ವೀರನು ಸ್ವರ್ಗಲೋಕದಲ್ಲಿ ತಂಗಿರುವುದನ್ನು ಸಾಮಾನ್ಯವಾಗಿ ಕಾಣಬಹುದು. ವೀರನ ಹೋರಾಟ ದೃಶ್ಯದಲ್ಲಿ ಚಿತ್ರ ದೊಡ್ಡದಾಗಿರುತ್ತದೆ. ಆತನನ್ನು ಕೆಳಹಂತದ ಶಿಲ್ಪದ ಭಾಗದಲ್ಲಿ ಚಿತ್ರಿಸುವುದು ಸಾಮಾನ್ಯ. ಈ ದೃಶ್ಯದಲ್ಲಿ ವೀರನ-ಶತ್ರುಗಳ ವಸ್ತ್ರಾಭರಣ, ಆಯುಧ, ದೇಹಾಂಗ ವಿನ್ಯಾಸ, ಛತ್ರಿ-ಚಾಮರ, ವಿಭಿನ್ನ ಸೈನ್ಯಗಳ ವಿವರಗಳಿರುತ್ತವೆ. ಸಾಮಾನ್ಯವಾಗಿ ಕತ್ತಿ ಡೊಂಕಾಗಿರುತ್ತದೆ. ಗುರಾಣಿ ಆಯತಾಕಾರವಾಗಿರುತ್ತದೆ. ದೊಡ್ಡ ಬಿಲ್ಲು, ಬತ್ತಳಿಕೆಯಿದ್ದು, ಮಿತ ವಸ್ತ್ರಾಭರಣಗಳಿವೆ. ಕಿರೀಟ ಧರಿಸಿದ ಅಥವಾ ಯಜ್ಞೋಪವೀತ ಧರಿಸಿದ ವೀರ, ಕಾಲ್ದಳ, ಕುದುರೆದಳ ಸಾಮಾನ್ಯ ಅಪರೂಪಕ್ಕೆ ಗಜದಳ ಕಾಣುತ್ತದೆ. ಕೆಲವೊಮ್ಮೆ ರಾಜ ಚಿನ್ಹೆಯುಳ್ಳ ಧ್ವಜಸ್ತಂಭಗಳಿವೆ. ಅಂತಹವುಗಳಲ್ಲಿ ಆನೆ ಮತ್ತು ನಂದಿಯ ಧ್ವಜಸ್ತಂಭಗಳು ಈ ಕಾಲದಲ್ಲಿ ಕಾಣಿಸಿವೆ. ಕೆಲವೊಮ್ಮೆ ಹೋರಾಟದ ದೃಶ್ಯವನ್ನು ಎರಡು ಹಂತಗಳಲ್ಲಿ ಚಿತ್ರಿಸಲಾಗಿದೆ. ಅಪರೂಪಕ್ಕೆ ವೀರನು ವೈರಿಗಳ ವಿರುದ್ಧ ಹೋರಾಡುವುದನ್ನು ಶಿಲ್ಪದ ಎಡಭಾಗದಲ್ಲಿ ಚಿತ್ರಿಸಲಾಗಿದೆ. ಕೆಲವೊಮ್ಮೆ ಯುದ್ಧದಲ್ಲಿ ಮಹಿಳೆಯರ ಮಾನರಕ್ಷಣೆ ಮಾಡಿದ ಅಂಶಗಳಿವೆ. ವೈರಿಯು ವೀರನ ಪಾದಕ್ಕೆ ನಮಸ್ಕರಿಸುವ ಚಿತ್ರಗಳಿವೆ. ಬತ್ತಳಿಕೆಯನ್ನು ಹೊತ್ತವರು ಸಹ ಇದ್ದಾರೆ. ಡೊಂಕು ಕತ್ತಿಗಳನ್ನು ವೀರನ ಪರಿವಾರದವರು ಹಿಡಿದುಕೊಂಡಿದ್ದಾರೆ. ವೈರಿ ಪಡೆಯವರು ಕೆಲವೊಮ್ಮೆ ಬಿಲ್ಲುಗಳನ್ನು ಹಿಡಿದಿರುವರು. ಕಳ್ಳರು ಕದ್ದ ಹಸುಗಳನ್ನು ವೀರನು ಬಿಡಿಸಿದರೆ, ಆ ಹಸುಗಳನ್ನು ಶಿಲ್ಪದ ಎಡಗಡೆಯಿಂದ ಬಲಕ್ಕೆ ಬರುವುದನ್ನು ಅಥವಾ ವೀರನ ಬಲಬದಿಗಳಲ್ಲಿ ಇರುವುದನ್ನು ತೋರಿಸಲಾಗಿದೆ. ಬಾಣಗಳು ವೀರನ ಮೈಗೆ ನೆಟ್ಟ ಉದಾಹರಣೆಗಳು ಕಡಿಮೆ. ಆದರೆ ಗುರಾಣಿಗೆ ನೆಟ್ಟ ಉದಾಹರಣೆಗಳು ಹೆಚ್ಚಾಗಿವೆ. ವೀರನ ಲೌಕಿಕ ನೆಲೆಗಟ್ಟಿಗೆ ಯಾವ ರೀತಿಯಲ್ಲಿ ಸಮಾಜ ಸ್ಪಂದಿಸುತ್ತಿತ್ತು ಎನ್ನುವುದನ್ನು ಕಾಣಬಹುದು. ದೇಶಕ್ಕಾಗಿ, ಊರಿಗಾಗಿ, ರಾಜ್ಯಕ್ಕಾಗಿ, ವೀರನು ವೈರಿಗಳ ವಿರುದ್ಧ ಕಳ್ಳರ ವಿರುದ್ಧ ಹೋರಾಡಿ ಮಡಿಯುವುದು ಪುಣ್ಯದ ಕೆಲಸವೆಂದು ನಂಬಲಾಗಿತ್ತು. ವೀರ ಪರಾಕ್ರಮವನ್ನು ರುದ್ರ, ಭೀಮ, ಭೈರವ, ಯಮ, ಅರ್ಜುನ, ಭೀಷ್ಮ, ಅಭಿಮನ್ಯು, ಹೀಗೆ ಮುಂತಾಗಿ ಶಾಸನಗಳು ಹೊಗಳಿವೆ. ಅವು ವೀರತನವನ್ನು ತಂದುಕೊಳ್ಳಲು ಸ್ಫೂರ್ತಿಯಾಗಿದ್ದವು.

ಎರಡನೆಯ ದೃಶ್ಯದಲ್ಲಿ ಮಡಿದ ವೀರನನ್ನು ಅಪ್ಸರೆಯರು ಅವನ ಕೈಗಳನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ಆಕಾಶದಲ್ಲಿ ಹಾರುತ್ತಿರುವುದು ಸಾಮಾನ್ಯ. ಅವರನ್ನು ಗಂಧರ್ವರು, ವಾದ್ಯ, ಮೇಳ, ಸಂಗೀತ, ನೃತ್ಯದೊಂದಿಗೆ ಹಾರವನ್ನು ಹಾಕಿ ಶುಭ ಕೋರುತ್ತ ಸ್ವರ್ಗಲೋಕಕ್ಕೆ ಒಯ್ಯುವ ದೃಶ್ಯವನ್ನು ಮನಮುಟ್ಟುವ ಹಾಗೆ ಚಿತ್ರಿಸಲಾಗಿದೆ. ಅವರು ಆಕಾಶದಲ್ಲಿ ಹಾರುತ್ತಿರುವುದನ್ನು ಆಕಾಶದ ಚಿತ್ರಣವನ್ನು ಮೋಡ ಪಟ್ಟಿಕೆಗಳು ಸುತ್ತ ಆವರಿಸಿ ಅಥವಾ ಮೋಡಗಳು ಚಲಿಸುತ್ತಿರುವಂತೆ ತೋರಿಸಲಾಗಿದೆ.

ಮೂರನೆಯ ಹಂತದ ದೃಶ್ಯದಲ್ಲಿ ಮಡಿದ ವೀರನು ಸ್ವರ್ಗದಲ್ಲಿ ದೇವಲೋಕದಲ್ಲಿ ಆಸೀನನಾಗಿರುವುದು ಸಾಮಾನ್ಯ. ಅಪ್ಸರೆಯರಿಂದ ತನಗೆ ಬೇಕಾದ ಇಷ್ಟಾರ್ಥಗಳಿಂದ ಪ್ರಸ್ತುತ ವೀರಗಲ್ಲುಗಳ ಸನ್ನಿವೇಶದಿಂದ ತಿಳಿದುಬರುವುದು. ಈ ದೃಶ್ಯವನ್ನು ಸಾಮಾನ್ಯವಾಗಿ ಚೈತ್ರಗವಾಕ್ಷದ ನಡುವೆ, ವಿರಳವಾಗಿ ಪ್ರತ್ಯೇಕ ಚಿತ್ರಪಟದಲ್ಲಿ ಹಾಕಿರುವುದನ್ನು ಕಾಣಬಹುದು. ವೀರನು ಕಮಲ ಹಿಡಿದು, ವೇದಿಕೆ ಅಥವಾ ಸಿಂಹಾಸನದ ಮೇಲೆ ಕುಳಿತಿರುವುದು ಸಾಮಾನ್ಯ. ಅಪರೂಪವಾಗಿ ಆತನ ಒಂದು ಕೈ ಆಶೀರ್ವಾದದ ಭಂಗಿಯಲ್ಲಿ ತೋರಿಸಲಾಗಿದೆ. ಆತನ ಬದಿಗಳಲ್ಲಿ ಇಬ್ಬರು ಅಥವಾ ನಾಲ್ವರು ಅಪ್ಸರೆಯರು ಇರುವುದನ್ನು, ಕೆಲವೊಮ್ಮೆ ಅಪರೂಪವಾಗಿ ವಾದ್ಯ ಮತ್ತು ನೃತ್ಯ ಮೇಳದವರು ಇರುವುದನ್ನು ಚಿತ್ರಿಸಲಾಗಿದೆ. ಒಂದು ಶಿಲ್ಪದಲ್ಲಿ ಒಂದು ಅರೆಗಂಬದ ಬುಡದಲ್ಲಿ ಏಳು ಮುಖಲಿಂಗ ಇರುವುದನ್ನು ಚಿತ್ರಿಸಲಾಗಿದೆ. ಇನ್ನೊಂದು ಶಿಲ್ಪದಲ್ಲಿ ಪಗೋಡ ಮಾದರಿಯ ಶಿಖರಗಳಿರುವುದು ಅಪರೂಪವೆನಿಸಿದೆ. ಶಿಲ್ಪಗಳ ಮೇಲ್ಭಾಗದಲ್ಲಿ ಶಾಲಾ ಮಾದರಿಯ ವಿಮಾನವಿರುತ್ತದೆ. ಅದರಲ್ಲಿ ಶಿವಲಿಂಗ, ಗಣೇಶ, ನಂದಿ, ಮಹಿಷಾಸುರ ಮರ್ದಿನಿ, ನಟರಾಜ, ವಿಷ್ಣು, ಬ್ರಹ್ಮ, ನರಸಿಂಹ ಮುಂತಾದ ದೇವತೆಗಳನ್ನು ಚಿತ್ರಿಸಲಾಗಿದೆ. ಸಾಮಾನ್ಯ ಶಿಲ್ಪದ ಕೆಳಭಾಗದಲ್ಲಿ ವಿರಳವಾಗಿ ಈ ದೇವತೆಗಳ ಚಿತ್ರಗಳಿವೆ. ಈ ಚಿತ್ರಗಳಿಂದ ಮಡಿದ ವೀರನು ದೇವರ ಸಾನ್ನಿಧ್ಯದಲ್ಲಿರುವುದು ತಿಳಿದುಬರುತ್ತದೆ.

ಈ ಭಾಗದಲ್ಲಿ ಮಡಿದ ವೀರನನ್ನು ವಿಮಾನದಲ್ಲಿ ಕೂಡಿಸಿಕೊಂಡು ಅಪ್ಸರೆಯರು ಒಯ್ಯುವುದು ಸಾಮಾನ್ಯವಾಗಿ ಕಾಣುವುದು. ಈ ಕಾಲಪೂರ್ವದಲ್ಲಿ ಮಡಿದ ವೀರನನ್ನು ಅಪ್ಸರೆಯರು ಅವನ ಕೈಗಳನ್ನು ಹೆಗಲ ಮೇಲೆ ಹೊತ್ತು ಒಯ್ಯುವ ದೃಶ್ಯ ವಿರಳ. ಸ್ವರ್ಗ ದೃಶ್ಯದಲ್ಲಿ ವೀರನು ಸಾಮಾನ್ಯವಾಗಿ ತನ್ನ ಅಧಿದೇವತೆ (ಶಿವಲಿಂಗ)ಯ ಬಲಗಡೆ ಕೈಮುಗಿದು ಕುಳಿತಿರುವನು. ಕೆಲವೊಮ್ಮೆ ಆತನು ಶಿವಲಿಂಗದ ಎಡಗಡೆ ಕುಳಿತಿರುವ ಉದಾಹರಣೆಗಳು ಕಾಣುತ್ತವೆ. ಅದೇ ರೀತಿ ಕುಳಿತ ನಂದಿ ಮತ್ತು ಆರಾಧಿಸುವ ಯತಿ, ಶಿವಲಿಂಗದ ಪಾಣಿಬಟ್ಟಲು ಸಾಮಾನ್ಯವಾಗಿ ಎರಡು ಆಯತಾಕಾರ ಪಟ್ಟಿಗಳಿರುತ್ತವೆ. ಶಿವಲಿಂಗದ ತಲೆಗೆ ರುದ್ರಾಕ್ಷಿಗಳನ್ನು ಸುತ್ತಿ ಅಲಂಕರಿಸಲಾಗಿದೆ. ವಿರಳವಾಗಿ ಶಿವಲಿಂಗದ ತಲೆಭಾಗ ತ್ರಿಕೋನಾಕಾರದಲ್ಲಿರುವುದು ವಿಶೇಷ. ವಿಜಯನಗರ ಕಾಲದ ಶಿವಲಿಂಗಗಳ ಪಾಣಿಬಟ್ಟಲು ವೃತ್ತಾಕಾರದಲ್ಲಿವೆ. ಯುದ್ಧ ದೃಶ್ಯದಲ್ಲಿ ವೀರನನ್ನು ಎಡಗಡೆ ಕೆಲವೊಮ್ಮೆ ತೋರಿಸಲಾಗಿದೆ. ಹುಲಿಯ ಜೊತೆ ವೀರನು ಹೋರಾಡುವ ಡೋಣಿಯ ಶಿಲ್ಪ, ಲಕ್ಷ್ಮೇಶ್ವರದ ಎತ್ತಿನ ಎಣ್ಣೆಗಾಣ ಶಿಲ್ಪ ಇತ್ಯಾದಿ ಅಪರೂಪದ್ದಾಗಿವೆ.

ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದ ಹೊರವಲಯದಲ್ಲಿ ಡೋಣಿಕಮ್ಮನ ದೇವಾಲಯವಿದೆ. ಡೋಣಿಕಮ್ಮನ ಮೂರ್ತಿಯನ್ನು ನೋಡಿದಾಗ ಅದು ಬಳ್ಳಾರಿ ಮೂರ್ತಿಯಂತೆ ಕಾಣುತ್ತದೆ. ಅಂದರೆ ಅದು ಮೂಲತಃ ಬಳ್ಳಾರಿ ದೇವಾಲಯವಾಗಿದೆ. ಈ ದೇವಿಗೆ ಒಬ್ಬ ವ್ಯಕ್ತಿಯು ತಲೆಗೊಟ್ಟು ಆತ್ಮಬಲಿದಾನ ಮಾಡಿಕೊಂಡಿದ್ದಾನೆ. ದೇವಿಯ ಮುಂದೆ ಅವನ ರುಂಡಕ್ಕೆ ಕುರಿ ತಲೆ ಜೋಡಿಸಿದ ಮುಂಡವನ್ನು ಶಿಲ್ಪದಲ್ಲಿ ಕೆತ್ತಿ ನಿಲ್ಲಿಸಲಾಗಿದೆ. ಟಗರಿನ

ತಲೆ ಹೊಂದಿದ ಈ ವ್ಯಕ್ತಿಯು ಕೈಮುಗಿದು ನಿಂತಿದ್ದಾನೆ. ಅವನ ಪಕ್ಕದಲ್ಲಿ ರುಂಡದ ಶಿಲ್ಪವಿದೆ. ಅಲ್ಲದೇ ಸ್ಥಳೀಯರು ಈ ದೇವತೆಗೆ ಒಬ್ಬ ವ್ಯಕ್ತಿ ಬಲಿಯಾಗುವುದನ್ನು ಹೇಳುತ್ತಾರೆ. ಅಲ್ಲದೇ ಈ ದೇವತೆಗೆ ಜಾತ್ರೆ ಮಾಡಬೇಕೆಂದರೆ ಅವಳು ನರಬಲಿ ಬೇಡುತ್ತಾಳೆಂದು ಆಕೆಯ ಜಾತ್ರೆ ಮಾಡುವುದನ್ನು ನಿಲ್ಲಿಸಲಾಗಿದೆ.

ಪ್ರಾಚೀನ ಕಾಲದಲ್ಲಿ ಕೆರೆಗಳ ನಿರ್ಮಾಣದ ಸಂದರ್ಭದಲ್ಲಿ ಅಥವಾ ಅತಿ ಮಳೆಯ ಪ್ರಮಾಣದಿಂದ ತುಂಬಿ ಕೆರೆಯ ಒಡ್ಡು ಒಡೆದು ಗ್ರಾಮಕ್ಕೆ ಹಾನಿಯಾಗುವ ಸಂದರ್ಭ ಬಂದರೆ ಅದಕ್ಕೆ ಬಲಿ ನೀಡಿ ಉಳಿಸಿಕೊಳ್ಳುವ ನಂಬಿಕೆ ಇತ್ತು. ಇಂತಹ ಕೆರೆಗೆ ಹಾರವಾದ ಸ್ತ್ರೀಯನ್ನು ಹೊನ್ನಮ್ಮನೆಂದು ಕರೆಯುತ್ತಾರೆ. ತನ್ನ ಆತ್ಮಬಲಿದಾನದ ಮೂಲಕ ಕೆರೆಯಲ್ಲಿ ನೀರು ನಿಲ್ಲುವಂತೆ ಮಾಡಿ ಗ್ರಾಮದ ಸಂಪತ್ತಿನ ಹೆಚ್ಚಳಕ್ಕೆ ಕಾರಣಳಾದ ಈಕೆಯು ಹೊನ್ನಮ್ಮಳೇ ಆಗುತ್ತಾಳೆ. ಕೆರೆಗೆ ಬಲಿಯಾದವರನ್ನು ದೈವೀಸ್ವರೂಪಳೆಂದು ಭಾವಿಸಿ ಆಕೆಯ ನೆನಪಿಗಾಗಿ ಸ್ಮಾರಕವನ್ನು ಅಥವಾ ದೇವಾಲಯವನ್ನು ನಿರ್ಮಿಸಲಾಗುತ್ತಿತ್ತು. ಇಂತಹ ಕೆರೆಗೆ ಹಾರವಾದ ನಿದರ್ಶನ ಈ ಪ್ರದೇಶದಲ್ಲಿ ಕಂಡುಬಂದಿವೆ.

ಮುಂಡರಗಿ ತಾಲ್ಲೂಕಿನ ಡೋಣಿ ಗ್ರಾಮದಲ್ಲಿ ಬೃಹತ್ ಕೆರೆಯಿದ್ದು, ಆ ಕೆರೆ ಕಟ್ಟೆ ನಿಲ್ಲುವುದಕ್ಕೆ ಹೊನ್ನಮ್ಮ ಎಂಬ ದಲಿತ ಸ್ತ್ರೀಯನ್ನು ಹಾರವಾಗಿ ಕೊಡಲಾಗುತ್ತದೆ. ಈ ಹೊನ್ನಮ್ಮ ಕೆರೆಗೆ ಹಾರವಾಗಿದ್ದರೂ ಕೆರೆ ಮಾತ್ರ ಗಟ್ಟಿಯಾಗಿ ನಿಲ್ಲದೇ ಒಡೆದು ಹೋಗಿದೆ. ಅಲ್ಲಿ ಹೊನ್ನಮ್ಮನೆಂಬ ಪೂಜಿಸುವ ಶಿಲ್ಪವಿದೆ. ಈ ಶಿಲ್ಪದ ಕೆಳಭಾಗದಲ್ಲಿ ಒಬ್ಬ ವ್ಯಕ್ತಿ ಪದ್ಮಾಸನದಲ್ಲಿ ಕುಳಿತ ಶಿಲ್ಪವಿದೆ. ಅದರ ಪಕ್ಕದಲ್ಲಿ ಇನ್ನೊಂದು ನಿಂತ ಶಿಲ್ಪವಿದೆ ಅದರ ಮುಂಭಾಗದಲ್ಲಿ ಶಿವಲಿಂಗದ ಆಕೃತಿ ಇದೆ. ಪೂರ್ತಿ ಮೇಲ್ಭಾಗದಲ್ಲಿ ಪೂರ್ಣಕುಂಭದ ಚಿತ್ರವಿದೆ. ಈ ಶಿಲ್ಪವನ್ನು ಕೆರೆ ಹೊನ್ನಮ್ಮಳೆಂದು ಇಂದಿಗೂ ಸ್ಥಳೀಯರು ಪೂಜಿಸುತ್ತಾರೆ. ಕ್ರಿ. ಶ. 1275ಕ್ಕೆ ಸೇರಿದ್ದೆಂದು ಹೇಳುವ ನಿಷಿದಿ ಶಾಸನವೊಂದು ಪಾರ್ಶ್ವನಾಥ ದೇವಾಲಯದ ಒಳಗಡೆ ಸೇರಿದೆ. ಸಹ ಶ್ರೇಷ್ಠವೂ ಗಂಭೀರವೂ ಆದ ಸ್ಯಾದ್ವಾದವೆಂಬ ಲಾಂಛನವನ್ನು ಹೊಂದಿರುವ ಮೂರು ಲೋಕಗಳಿಗೆ ಒಡೆಯನಾದ ಜಿನನ ಶಾಸನವು ಜಯಿಸಲಿ ಎಂದು ಹೇಳುತ್ತದೆ. ಇದು ಸೊರಟೂರ ತಿಳಕರಸ ಭುಜಾದೋರ್ದ್ದಂಡ ಸನ್ಮಂಡನ, ಮಹಾಪ್ರಧಾನ ಬಾಹತ್ತರ ನಿಯೋಗಾಧಿಪತಿ ಮಂತ್ರಿಲಲಾಮನಾದ ಹೆಗ್ಗಡೆ ದೇವಣ್ಣನ ಮಗ ಅಮೃತೆಯ್ಯನು ಸ್ವರ್ಗಸ್ಥನಾದನೆಂದು ತಿಳಿಸುತ್ತದೆ. ಇವನು ದೇವಸೇನ ಮುನಿಗಳಿಂದ ದೀಕ್ಷೆ ಪಡೆದು ಸನ್ಯಾಸತ್ವವನ್ನು ಧರಿಸಿ ಸ್ವರ್ಗಸ್ಥನಾದನೆಂದು ಉಲ್ಲೇಖಿಸುತ್ತದೆ.

ಕ್ರಿ. ಶ. 1421ರ ಶಾಸನವು ಮುಳಗುಂದದ ಚಂದ್ರನಾಥ ಬಸದಿಯ ಗೋಡೆಯಲ್ಲಿದೆ. ಈ ಶಾಸನವು ಶ್ರೇಷ್ಠವೂ ಗಂಭೀರವೂ ಆದ ಸ್ಯಾದ್ವಾದವೆಂಬ ಲಾಂಛನವನ್ನು ಹೊಂದಿರುವ ಹಾಗೂ ಮೂರು ಲೋಕಗಳ ಒಡೆಯನಾದ ಜಿನನ ಶಾಸನವು ಜಯಿಸಲಿ ಎಂದು ಜಿನನ ಕುರಿತು ಶ್ಲೋಕವಿರುವುದಲ್ಲದೇ ಬಲಾತ್ಕಾರಗಣದ ಭಟ್ಟಾರಕ ದೇವರ ಶಿಷ್ಯ ಹಾಗೆಯೇ ಸೊರಟೂರ ತಿಳಕರಸ ಮಹಾಪ್ರಧಾನ ಬಾಹುತ್ತರ ನಿಯೋಗಾಧಿಪತಿ ಮಂತ್ರಿ ತಿಲಕನಾದ ಹೆಗ್ಗಡೆ ಹಾಗೂ ಸೇನಾಭೋವ ಮಧುವರಸನ ಮಗ ನಾಗರಸನು ಸ್ವರ್ಗಸ್ಥನಾದನೆಂದು ಶಾಸನ ತಿಳಿಸಿದೆ. 12ನೇ ಶತಮಾನದ ಹೊಸೂರಿನಲ್ಲಿರುವ ಅಪ್ರಕಟಿತ ನಿಷಿದಿ ಶಾಸನವೊಂದರಲ್ಲಿ ಜೈನ ಮೂಲ ಸಂಘ ಕಾಣೂರ್ಗಣದ ಸಕಳ ಪಂಥದ ಭಟ್ಟಾರಕರ ಗುಡ್ಡರು, ಗಾಣಿಗ, ಹೊಂಚಿಶೆಟ್ಟಿ, ಸಕರಶೆಟ್ಟಿ ನಿಷಿದಿಗೆ ಎಂದು ಉಲ್ಲೇಖಿಸಲಾಗಿದೆ.

ಸೊರಟೂರಿನ ನಿಷಿದಿ ಶಾಸನವೊಂದರಲ್ಲಿ ಶ್ರೀ ನರೇಂದ್ರಸೇನ ಭಟ್ಟಾರಕರ ಗುಡ್ಡ ಹೆಬ್ಬಾಗಿಯ ನಗಾವುಂಡನ ಹೆಂಡತಿ ಪಮಿಗವುಂಡಿ ಸ್ವರ್ಗಸ್ಥಳಾದಳೆಂದು ತಿಳಿದುಬರುತ್ತದೆ.

ಇನ್ನೊಂದು ಸೊರಟೂರು ಗ್ರಾಮದಲ್ಲಿ ದೊರೆತ ನಿಷಿದಿ ಶಾಸನದಲ್ಲಿ ತ್ರೈಲೋಕ್ಯರಸನ ಮಂತ್ರಿ ಮತ್ತು ಬಾಹತ್ತರನಿಯೋಗಾಧಿಪತಿಯಾದ ಮಹಾಪ್ರಧಾನ ಹೆಗ್ಗಡೆ ದೇವಣ್ಣನ ಮಗ ಅಮೃತಯ್ಯನು ಜೈನಧರ್ಮದ ವ್ರತದಂತೆ ಸನ್ಯಾಸದೀಕ್ಷೆ ಪಡೆದು ಮರಣ ಹೊಂದಿದನೆಂದು ತಿಳಿದುಬರುತ್ತದೆ. ಹೊಸೂರು ಗ್ರಾಮದ ಮೈಲಾರಲಿಂಗ ದೇವರ ಗುಡಿಯ ಎದುರಿಗೆ ಸುಮಾರು 7 ಅಡಿ ಎತ್ತರ 4 ಅಡಿ ಅಗಲವಿರುವ 2 ಶಾಸನರಹಿತ ಸತಿಗಲ್ಲುಗಳು ದೊರೆತಿದ್ದು, ಇವುಗಳನ್ನು ಶಿಲ್ಪದ ಮೇಲಿಂದ ವಿಜಯನಗರದ ಕಾಲದವುಗಳೆಂದು ಗುರುತಿಸಲಾಗಿದೆ. ಇಂತಹ ಎತ್ತರದ ವೀರಗಲ್ಲುಗಳು ವಿರಳವೆಂದೇ ಹೇಳಬಹುದು. ಇವುಗಳ ಮೇಲಿಂದ ಈ ಭಾಗದಲ್ಲಿ ವಿಜಯನಗರದ ಕಾಲದವರೆಗೂ ಸತಿಪದ್ಧತಿ ಮುಂದುವರೆದಿತ್ತೆಂದು ತಿಳಿದುಬರುತ್ತದೆ. ಕಣವಿಯ ವೀರಗಲ್ಲಿನಲ್ಲಿ ಚೌಡಯ್ಯನಾಯಕನ ಮಗ ದೇವಯ್ಯನಾಯಕ ಎಂದು ಮಾತ್ರ ತಿಳಿದುಬರುತ್ತದೆ. ಆದರೆ ಶಾಸನದ ಶಿಲ್ಪದ ಮೇಲಿಂದ ಇದೊಂದು ವೀರಗಲ್ಲೆಂದು ಮಾತ್ರ ಗುರುತಿಸಬಹುದು. ವೀರಗಲ್ಲು ತುಟಿತವಾಗಿದ್ದು, ಪಠ್ಯವಿಷಯ ಸ್ಪಷ್ಟವಾಗಿಲ್ಲ.

ಡೋಣಿ ಗ್ರಾಮದ ಡೋಣಿಕಮ್ಮನ ಗುಡಿ ಎದುರಿನ ದಿಬ್ಬದ ಮೇಲಿರುವ ನಿಷಿದಿ ಶಾಸನ ಸು. 12ನೇ ಶತಮಾನದ್ದು. 1 ಅಡಿ ಅಗಲ 4 ಅಡಿ ಎತ್ತರ ಪೂರ್ವಾಭಿಮುಖವಾಗಿ ನಿಲ್ಲಿಸಿದ ನಿಷಿದಿಕಲ್ಲು ಇದಾಗಿದ್ದು, ಮೇಲೆ ಕುಳಿತ ತೀರ್ಥಂಕರನ ಶಿಲ್ಪವಿದೆ. ಕೆಳಗೆ ಈ ಶಾಸನವನ್ನು ಕೆತ್ತಲಾಗಿದೆ. ಮೂಲ ಸಂಘಕ್ಕೆ ಸೇರಿದ ಜಯಕೀರ್ತಿ ದೇವರ ನಿಷಿದಿಶಾಸನ ಇದಾಗಿರಬಹುದು. ಇದು ತುಟಿತಗೊಂಡಿರುವುದರಿಂದ ವಿಷಯ ಸ್ಪಷ್ಟವಾಗಿಲ್ಲ. ಮುನಿಗಳಾದ ಈ ಜಯಕೀರ್ತಿ ದೇವರು ತಮ್ಮ ಜೀವಿತ ಕಾಲದಲ್ಲಿ ಸಂಚಾರಗೈಯುತ್ತ ಧರ್ಮ ಪ್ರಭಾವನೆಯನ್ನು ಮಾಡುತ್ತ ಮುನಿಶಿಷ್ಯರನ್ನು ಶ್ರಾವಕ ಶಿಷ್ಯ ಬಳಗವನ್ನು ಹೊಂದಿ ಅಪಾರ ಜನಪ್ರಿಯತೆಯನ್ನು ಹೊಂದಿದ್ದರೆಂದು ಇಲ್ಲಿಯ ಜಾವೂರಿನ ಶಾಸನವು ಉಲ್ಲೇಖಿಸುತ್ತದೆ. ಸೊರಟೂರಿನ ಪಾಳುಬಿದ್ದ ಜೈನಬಸದಿಯಲ್ಲಿ ಒಂದು ನಿಷಿದಿ ಶಾಸನವಿದೆ. ಇದು ಕ್ರಿ. ಶ. 13ನೇ ಶತಮಾನದ್ದಾಗಿದೆ. ಈ ಶಾಸನವು ಸ್ವಸ್ತಿ ಶ್ರೀತು ನರೇಂದ್ರ ಭಟ್ಟಾರಕರ ಗುಡ್ಡ ಹೆಬ್ಬಾಗಿಯ ನಗಗೌಂಡನ ಹೆಂಡತಿ ಪಮಿಗುಡತಿ ಸ್ವರ್ಗಸ್ತ ಆದಳು ಎಂದಿದೆ. ಇದು ನರೇಂದ್ರ ಭಟ್ಟಾರಕನ ಶಿಷ್ಯ ಹೆಬ್ಬಾಗಿಯ ನಾಗಗೌಡನ ಹೆಂಡತಿಯಾದ ಪಮ್ಮಿಗೌಡತಿ ಸ್ವರ್ಗಸ್ಥಳಾದಳೆಂದು ಉಲ್ಲೇಖಿಸಿದೆ.

ಗದಗ ತಾಲ್ಲೂಕಿನ ಕಣವಿ ಗ್ರಾಮದ ಅಲ್ಲಮಪ್ರಭು ದೇವಾಲಯದ ಪಕ್ಕದಲ್ಲಿ ಒಂದು ನಿಷಿದಿ ಶಿಲ್ಪವಿದೆ. ಈ ಶಿಲ್ಪದ ವಿನ್ಯಾಸವನ್ನು ಗಮನಿಸಿದರೆ ಇದು ಸುಮಾರು 10ನೇ ಶತಮಾನಕ್ಕೆ ಸೇರಿದ ಶಿಲ್ಪವಾಗಿದೆ. ಇದು ಮೂರು ಹಂತದಲ್ಲಿದೆ. ಮೊದಲನೆಯ ಹಂತದಲ್ಲಿ ಬೆಂಕಿಯನ್ನು ಹೊತ್ತಿಸಿರುವಂತೆ ಕಾಣುತ್ತದೆ. 2ನೇ ಹಂತದಲ್ಲಿ ಜಿನಮುನಿಯು ಬಲಭಾಗದಲ್ಲಿದ್ದು ಪೀಠದ ಮೇಲೆ ಪರ್ಯಂಕಾಸನದಲ್ಲಿ ವ್ಯಾಸಪೀಠದ ಮುಂದೆ ಮುಖ ಮಾಡಿ ಕುಳಿತಿರುವನು. ಅವನು ಒಬ್ಬ ಸ್ತ್ರೀಗೆ ಬೋಧಿಸುತ್ತಿರುವಂತೆ ಕಾಣುತ್ತದೆ. ಮಧ್ಯದಲ್ಲಿ ವ್ಯಾಸಪೀಠದ ಮುಂದೆ ಕೈಮುಗಿದು ಕುಳಿತಿರುವಳು. ಈತನ ಮೇಲೆ ಛತ್ರಿಯ ಚಿತ್ರವಿದೆ. 3ನೇ ಹಂತದಲ್ಲಿ ಮಂಟಪದಲ್ಲಿ ಜಿನನು ಅರ್ಧ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವನು. ಬಲಭಾಗದಲ್ಲಿ ವ್ರತಧಾರಿ ಮುನಿಯು ಪರ್ಯಂಕಾಸನದಲ್ಲಿ ಜಿನನಿಗೆ ಕೈಮುಗಿದು ಕುಳಿತಿರುವನು. ಇವನ ತಲೆಯ ಮೇಲೆ ಛತ್ರಿಯ ಚಿತ್ರವಿದೆ. ಎಡಭಾಗದಲ್ಲಿ ಸ್ತ್ರೀಯು ಪರ್ಯಂಕಾಸನದಲ್ಲಿ ಜಿನನಿಗೆ ಕೈಮುಗಿದು ಕುಳಿತಿದ್ದಾಳೆ. ಇವರಿಬ್ಬರು ಸತಿ–ಪತಿಯರಂತೆ ತೋರುತ್ತದೆ. ಇವರು ಒಟ್ಟಿಗೆ ವ್ರತಾಚರಣೆಯನ್ನು ಮಾಡಿ ಮರಣಿಸಿರಬಹುದೆಂದು ಇದರಿಂದ ತಿಳಿಯಬಹುದು. ಮಂಟಪದ ಮೇಲೆ ಕಳಸಾಕೃತಿ

ಇದೆ. ಸೂರ್ಯ-ಚಂದ್ರರ ಚಿತ್ರಗಳು ಇವೆ. ಈ ಶಿಲ್ಪದ ಮೇಲ್ಭಾಗದಲ್ಲಿ ಕೀರ್ತಿಮುಖವಿದ್ದು, ಸುತ್ತಲೂ ಲತಾ ಬಳ್ಳಿಗಳಿಂದ ಅಲಂಕರಣ ಮಾಡಿರುವುದನ್ನು ಕಾಣಬಹುದು.

ಕಣವಿ ಗ್ರಾಮದ ಮೈಲಾರಲಿಂಗನ ದೇವಾಲಯದ ಹತ್ತಿರ ಕ್ರಿ. ಶ. 1407ರ 1ನೇ ಹರಿಹರನ ಕಾಲದ ಶಾಸನದಲ್ಲಿ ನಾಗಾಯಿ ಮತ್ತು ದೇಮಾಯಿಯರು ಮಹಾಸತಿಯಾದ ವಿವರವಿದೆ. ಈ ಶಾಸನದಲ್ಲಿ ಸ್ವಸ್ತಿ ಶ್ರೀ ಶಕವರುಷ 1329ನೆಯ ಸರ್ವಜಿತು ಸಂವತ್ಸರದ ಶ್ರವಣ ಬಹುಳ 5 ಆದಿತ್ಯವಾರ ಶ್ರೀ ವೀರ ಹರಿಹರ ಮಹಾರಾಯರ ಕಿಲಾರಿ ಸಾಯಿನಾಯ್ಕನ ಮಗ [ದೇವ] ನಾಯಕ ಅವನ ಪತ್ನಿಯರಾದ ನಾಗಾಯಿ ದೇಮಾಯಿಗಳು ಮಹಾಸತಿಯರಾಗಿ ಆತನ ಸಂಗಡ ಸ್ವರ್ಗಸ್ಥರಾದರು ಬೀರಗಲ್ಲಿಗೆ ಮಂಗಳ ಮಹಾ ಶ್ರೀ. ಶ್ರೀ. ಶ್ರೀ ಶ್ರೀ. ಶ್ರೀ ಎಂದು ಉಲ್ಲೇಖವಿದೆ. ಇದರಲ್ಲಿ ವೀರ ಹರಿಹರರಾಯನು ಸಾಯಿನಾಯಕನನ್ನು ಕಿಲಾರಿ ಎಂದು ಹೇಳಿದ್ದಾನೆ.

ಮುಂಡರಗಿ ತಾಲ್ಲೂಕಿನ ಡಂಬಳ ಗ್ರಾಮದ ಪ್ಯಾಟಿ ಬಸವಣ್ಣನ ಗುಡಿಯಲ್ಲಿ ಕ್ರಿ. ಶ. 17ನೇ ಶತಮಾನಕ್ಕೆ ಸೇರಿದ ವೀರಮಾಸ್ತಿಶಿಲ್ಪವಿದೆ. ಈ ಶಿಲ್ಪದ ಎಡಭಾಗದಲ್ಲಿ ಸತಿ ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದು ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಇವಳು ಸೀರೆಯನ್ನು ಧರಿಸಿದ್ದು ಆ ಸೀರೆಯ ನೆರಿಗೆಗಳು ಪಾದದವರೆಗೆ ಗರಿಗರಿಯಾಗಿ ಹರಡಿಕೊಂಡಿವೆ. ಬಲಭಾಗದಲ್ಲಿ ವೀರನು ಬಿಲ್ಲಿನಿಂದ ಬಾಣವನ್ನು ಹೂಡುವಂತೆ ನಿಂತಿದ್ದಾನೆ. ತನ್ನ ಕಾಲುಗಳನ್ನು ಎಡಕ್ಕೆ ತಿರುಗಿಸಿ, ಮುಖವನ್ನು ನೇರವಾಗಿ ಮಾಡಿ ನಿಂತಿರುವನು. ಈ ಶಿಲ್ಪದ ಮೇಲೆ ಎಣ್ಣೆ, ಕುಂಕುಮವನ್ನು ಲೇಪಿಸಿದ್ದರಿಂದ ಅದರ ಕೆಲವು ಲಕ್ಷಣಗಳು ಅಸ್ಪಷ್ಟವಾಗಿವೆ.

ಇದೇ ಗ್ರಾಮದ ಮತ್ತೊಂದು ವೀರಮಾಸ್ತಿಶಿಲ್ಪ ಆಲದ ಮರದ ಕೆಳಗಿದೆ. ಇದು ಕ್ರಿ. ಶ. 18ನೇ ಶತಮಾನಕ್ಕೆ ಸೇರಿದ್ದಾಗಿದೆ. ಈ ಶಿಲ್ಪದಲ್ಲಿರುವ ವೀರನು ಒಂದು ಕೈಯಲ್ಲಿ ಈಟಿ ಮತ್ತೊಂದು ಕೈಯಲ್ಲಿ ಬಂದೂಕನ್ನು ಹಿಡಿದಿರುವನು. ಎಡಭಾಗಕ್ಕೆ ಹೊರಳಿ ನಿಂತಿದ್ದಾನೆ. ಇವನು ಮೊಣಕಾಲಿನ ಮೇಲ್ಭಾಗದವರೆಗೆ ವಸ್ತ್ರವನ್ನು ಧರಿಸಿದ್ದು, ಮಧ್ಯದಲ್ಲಿ ಕಟ್ಟಿದ ವಸ್ತ್ರದ ಕುಚ್ಚು ಪಾದಗಳವರೆಗೆ ಇಳಿಬಿದ್ದಿದೆ. ಕೈ ಮತ್ತು ಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು. ವೀರನ ಬಲಭಾಗಕ್ಕೆ ಸತಿಯು ನಿಂತಿದ್ದು, ತನ್ನ ಬಲಗೈಯನ್ನು ಅರ್ಧ ಮೇಲಕ್ಕೆ ಎತ್ತಿರುವಳು. ಮತ್ತೊಂದು ಕೈಯನ್ನು ಅರ್ಧಕ್ಕೆ ಎತ್ತಿ ಹಿಡಿದಿದ್ದಾಳೆ. ವೀರನ ಕಡೆಗೆ ಮುಖವನ್ನು ತಿರುಗಿಸಿ ನಿಂತಿರುವಳು. ತಲೆಯ ತುರುಬನ್ನು ಕಟ್ಟಿದ್ದಾಳೆ. ಸೊಂಟಕ್ಕೆ ಸೀರೆಯನ್ನು ಲಂಗದಂತೆ ಕಟ್ಟಿದ್ದಾಳೆ. ಹಿಂಭಾಗದಲ್ಲಿ ಎರಡೂ ಕಡೆಗಳಲ್ಲಿ ಹರಡಿದ್ದು, ತೊಡೆಯ ಮೇಲ್ಭಾಗದವರೆಗೆ ವಸ್ತ್ರದ ಕುಚ್ಚುಗಳಿದ್ದು, ಮಧ್ಯದಲ್ಲಿ ಧರಿಸಿದ ವಸ್ತ್ರದ ಗಂಟು ಇಳಿಬಿಟ್ಟಿದ್ದಾಳೆ. ಇದರಲ್ಲಿ ವೀರನು ಬಂದೂಕು ಹಿಡಿದಿರುವುದು ವಿಶೇಷವಾಗಿದೆ.

ಮುಂಡರಗಿ ತಾಲ್ಲೂಕಿನ ಗುಮ್ಮಗೋಳದ ಗುಮ್ಮಲಿಂಗೇಶ್ವರ ದೇವಾಲಯದ ಮುಂದೆ 12ನೇ ಶತಮಾನಕ್ಕೆ ಸೇರಿದ ತುರುಗೊಳ್ ವೀರಗಲ್ಲು ದೊರೆತಿದೆ. ಇದು ಮೂರು ಪಟ್ಟಿಕೆಯ ಶಿಲ್ಪವಾಗಿದ್ದು, ಮೊದಲನೇ ಪಟ್ಟಿಕೆಯಲ್ಲಿ ತುರುಗಳ ರಕ್ಷಣೆಗಾಗಿ ವೀರನು ಕಳ್ಳರೊಂದಿಗೆ ಹೋರಾಡುತ್ತಿರುವನು. ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಆಯತಾಕಾರದ ಗುರಾಣಿಯನ್ನು ಹಿಡಿದಿದ್ದಾನೆ. ತಲೆಯ ಮೇಲೆ ಮುಡಿಯನ್ನು ಕಟ್ಟಿರುವನು. ಅವನ ಹಿಂದೆ ಹಸುಗಳು ನಿಂತಿವೆ. ವೈರಿಯು ಬಿಲ್ಲು, ಬಾಣ ಹಿಡಿದು ನಿಂತಿದ್ದಾನೆ. ಇವನು ಸಹ ತಲೆಯ ಮೇಲೆ ಮುಡಿ ಕಟ್ಟಿದ್ದಾನೆ. ಕೆಳಭಾಗ ನೆಲದಲ್ಲಿ ಹೂತುಹೋಗಿದೆ. 2ನೇ ಹಂತದಲ್ಲಿ ಮಡಿದ ವೀರನನ್ನು ಅಪ್ಸರೆಯರು ಹಿಡಿದು ಮೇಲಕ್ಕೆ ಹಾರುತ್ತಿದ್ದಾರೆ. ಅಪ್ಸರೆಯರು ವೀರನ ಸೊಂಟವನ್ನು ಹಿಡಿದಿರುವರು. ಅವರು ಒಂದು ಕೈಯಲ್ಲಿ ಚೌರಿಯನ್ನು ಹಿಡಿದು

ಆಕಾಶದಲ್ಲಿ ಹಾರುತ್ತಿರುವಂತೆ ತೋರಿಸಲಾಗಿದೆ. 3ನೇ ಪಟ್ಟಿಕೆಯಲ್ಲಿ ಸ್ವರ್ಗದ ಚಿತ್ರಣವಿದೆ. ಇಲ್ಲಿ ಶಿವಲಿಂಗವಿದ್ದು ಅದರ ಮುಂಭಾಗದಲ್ಲಿ ವೀರನು ಕೈ ಮುಗಿದು ಕುಳಿತಿದ್ದಾನೆ. ಮೇಲೆ ಸೂರ್ಯ–ಚಂದ್ರರ ಚಿತ್ರಗಳಿವೆ.

ಡಂಬಳದ ಮಾರುತಿ ದೇವಾಲಯದ ಎದುರಿಗೆ ತುಟಿತವಾದ ತುರುಗೊಳ್ ವೀರಗಲ್ಲು ಇದೆ. ಇದು ಸುಮಾರು 12ನೇ ಶತಮಾನಕ್ಕೆ ಸೇರಿದ ಶಿಲ್ಪವಾಗಿದೆ. ಈ ಶಿಲ್ಪವು ಮೂರು ಹಂತಗಳಿಂದ ಕೂಡಿದೆ. ಮೊದಲನೆಯ ಹಂತ ಸ್ವಲ್ಪಭಾಗವು ನೆಲದಲ್ಲಿ ಹೂತಿದೆ. ಇದರಲ್ಲಿ ವೀರ ತುರುಗಳ ರಕ್ಷಣೆಗಾಗಿ ವೈರಿಗಳ ಪಡೆಯೊಂದಿಗೆ ಹೋರಾಡುತ್ತಿದ್ದಾನೆ. ಇಲ್ಲಿ ವೀರನು ಕತ್ತಿಯನ್ನು ಹಿಡಿದು ನಿಂತಿರುವನು. ಅವನ ಹಿಂದೆ ಆಕಳುಗಳು ನಿಂತಿವೆ. ಈ ಭಾಗ ನೆಲದಲ್ಲಿ ಹೂತಿರುವುದರಿಂದ ದೃಶ್ಯಗಳು ಅಸ್ಪಷ್ಟವಾಗಿವೆ. 2ನೇ ಹಂತದಲ್ಲಿ ವೀರನು ಮಂಟಪದಲ್ಲಿ ಕುಳಿತಿದ್ದಾನೆ. ಅವನ ಸುತ್ತ ದೇವಕನ್ನಿಕೆಯರು ಇರುವರು. ಇಲ್ಲಿ ಇಬ್ಬರು ಅಪ್ಸರೆಯರು ಕೆಳಗೆ ವಿಮಾನದ ಪಟ್ಟಿಯನ್ನು ಹಿಡಿದು ಕುಳಿತಿದ್ದಾರೆ. ಇಬ್ಬರು ಚಾಮರಧಾರಿ ಅಪ್ಸರೆಯರಿದ್ದಾರೆ. 3ನೇ ಹಂತದಲ್ಲಿ ಶಿವಲಿಂಗವಿದ್ದು, ಅದರ ಬಲಭಾಗದಲ್ಲಿ ಯತಿ ಹಾಗೂ ನಂದಿಶಿಲ್ಪ ಇರುವುದು. ಇವುಗಳ ಜೊತೆಗೆ ಆಕಳು ಕರುವಿಗೆ ಹಾಲುಣಿಸುತ್ತಿರುವ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರನ್ನು ಚಿತ್ರಿಸಿರುವ ಚಿತ್ರಣವನ್ನು ಕಾಣಬಹುದು.

ಗದಗ ತಾಲ್ಲೂಕಿನ ಶಿರೋಳ ಗ್ರಾಮದ ಮಾರುತಿ ದೇವಾಲಯದ ಆವರಣದಲ್ಲಿ ದಕ್ಷಿಣಾಭಿಮುಖವಾಗಿರುವ ತುರುಗೊಳ್ ಮತ್ತು ಪೆಣ್ಬುಯ್ಯಲ್ ವೀರಗಲ್ಲು ಮೂರು ಹಂತವನ್ನು ಹೊಂದಿದೆ. ಮೊದಲನೆಯ ಹಂತದಲ್ಲಿ ವೀರನು ತುರುಗಳ ರಕ್ಷಣೆಗಾಗಿ ಹೋರಾಡುತ್ತಿದ್ದಾನೆ. ವೀರನು ಬಿಲ್ಲಿನಿಂದ ಬಾಣವನ್ನು ವೈರಿಯ ಪಡೆಯ ಮೇಲೆ ಪ್ರಯೋಗಿಸುತ್ತಿದ್ದಾನೆ. ಕೆಳಗೆ ಒಬ್ಬ ಸೈನಿಕನು ಎದುರಾಳಿಯೊಂದಿಗೆ ಕತ್ತಿ ಹಿಡಿದು ಹೋರಾಡುತ್ತಿದ್ದಾನೆ. ಅವರ ಹಿಂದೆ ಸ್ತ್ರೀಯರಿರುವುದು ವಿಶೇಷವಾಗಿದೆ. ಇದರಿಂದ ವೀರನು ಸ್ತ್ರೀಯರ ಹಾಗೂ ಹಸುಗಳ ರಕ್ಷಣೆಗಾಗಿ ಕಳ್ಳರೊಂದಿಗೆ ಕಾದಾಡುತ್ತಿರಬಹುದು. ವೈರಿಯ ಪಡೆಯ ಸೈನ್ಯದವರು ಬಿಲ್ಲು, ಬಾಣ ಹಾಗೂ ಈಟಿಯನ್ನು ಹಿಡಿದುಕೊಂಡಿದ್ದಾರೆ. ಅವರ ಹತ್ತಿರ ಹಸುಗಳಿವೆ. 2ನೇ ಹಂತದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಅವರ ಸುತ್ತಲೂ ಗಂಧರ್ವ ಕನ್ನಿಕೆಯರು ನೃತ್ಯವನ್ನು ಮಾಡುತ್ತಿದ್ದಾರೆ. ಸುತ್ತಲೂ ಹಾರಾಡುತ್ತಿರುವ ಮೋಡದ ನಡುವೆ ವೀರನನ್ನು ಕರೆದೊಯ್ಯುತ್ತಿದ್ದಾರೆ. 3ನೇ ಹಂತದಲ್ಲಿ ಎರಡು ಅರೆಗಂಬಗಳ ಮಧ್ಯದಲ್ಲಿ ವೀರನು ಕುಳಿತಿರುವನು. ಅವನ ಪಕ್ಕದಲ್ಲಿ ಅಪ್ಸರೆಯರು ಅವನ ಸೇವೆಯನ್ನು ಮಾಡುತ್ತಿರುವರು. ಮೇಲೆ ಇಬ್ಬರು ಅಪ್ಸರೆಯರಿದ್ದಾರೆ. ಅಲ್ಲಿ ಹೂಬಳ್ಳಿಯ ಅಲಂಕಾರವಿದೆ. ಮೇಲ್ಭಾಗದಲ್ಲಿ ತ್ರಿಕೋನಾಕಾರದ ವಿಮಾನ ಮಾದರಿ ಕೂಡ ಇದ್ದದ್ದು ಕಂಡುಬರುತ್ತದೆ.

ಹೊಸೂರಿನ ತ್ರಿಕೂಟೇಶ್ವರ ದೇವಾಲಯದ ಎದುರಿಗೆ ಎರಡು ನವಿಲುಗಳನ್ನುಳ್ಳ ಸ್ಮಾರಕ ಶಿಲ್ಪ ಕಂಡುಬಂದಿದೆ. ಈ ಶಿಲ್ಪದಲ್ಲಿ ಇಬ್ಬರು ಸ್ತ್ರೀಯರು ಚಾಮರ ಹಿಡಿದು ಹಿಂದೆ ನಿಂತಿದ್ದಾರೆ. ಇದು ನವಿಲುಗಳನ್ನು ಸ್ವರ್ಗಕ್ಕೆ ಕೊಂಡೊಯ್ಯುವಂತೆ ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ಮಾನವರು ಪಕ್ಷಿಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರೆಂದು ಇದರಿಂದ ತಿಳಿದುಬರುತ್ತದೆ. ಇಂದಿಗೂ ಹೊಸೂರು ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ನವಿಲು ಅಧಿಕ ಸಂಖ್ಯೆಯಲ್ಲಿ ವಾಸಿಸುವುದು ಕಂಡುಬರುತ್ತದೆ. ಕುಕ್ಕೆಸುಬ್ರಹ್ಮಣ್ಯನ ದಾನಶಾಸನದಲ್ಲಿ ನವಿಲಿನ ಶಿಲ್ಪ ಇದೆ. ಆದರೆ ಗದಗ ತಾಲ್ಲೂಕಿನಲ್ಲಿ ಈ ನವಿಲುಗಳ ಸ್ಮಾರಕ ಶಾಸನ ತುಂಬ ಅಪರೂಪವಾಗಿದೆ.

ಒಟ್ಟಾರೆಯಲ್ಲಿ ಕಪ್ಪತ್ತಗುಡ್ಡ ಪರಿಸರದಲ್ಲಿ ಕಂಡುಬರುವ ಸ್ಮಾರಕಶಿಲ್ಪಗಳು, ವಿಶಿಷ್ಟವಾದ ಮಹತ್ವವನ್ನು ಪಡೆದಿವೆ. ಸ್ಮಾರಕಶಿಲ್ಪಗಳು ಸಾಂಸ್ಕೃತಿಕವಾಗಿ ತಮ್ಮ ಚಹರೆಯನ್ನು ಬಿಂಬಿಸಿವೆ. ಶಿಲ್ಪದ ದೃಷ್ಟಿಯಿಂದಲೂ ಸ್ಮಾರಕಶಿಲ್ಪಗಳು ಕಲಾತ್ಮಕವಾದ ಶಿಲೆಯಲ್ಲಿ ಯುದ್ಧದ ವರ್ಣನೆಯನ್ನು ಅತ್ಯದ್ಭುತವಾಗಿ ನಿರೂಪಿಸಿರುವುದನ್ನು ಕಂಡರೆ ಅವನ ವರ್ಣಾತ್ಮಕ ಜ್ಞಾನ ನಿಧಿಯು ಕಲಾಶೈಲಿಯಲ್ಲಿ ವೀರನ ಹೋರಾಟದ ಹಂತದಿಂದ ಸುರಾಂಗನೆಯರೊಂದಿಗೆ ಸ್ವರ್ಗಾರೋಹಣ ಮತ್ತು ದೇವರ ಸಾನ್ನಿಧ್ಯದಲ್ಲಿರುವ ವೀರನ ಸಕಾರಾತ್ಮಕ ಭಾವನೆಯನ್ನು ಮನಮೋಹಕವಾಗಿ ಚಿತ್ರಿಸಿರುತ್ತದೆ. ವೀರನ ಮತ್ತು ಅವನ ಪರಿವಾರದ, ಸೈನಿಕರ, ಅಪ್ಸರೆಯರ, ಸತಿಯರ ಯುದ್ಧ, ಪ್ರಾಣಿಗಳ ಉಡುಪು ಮತ್ತು ಪೋಷಾಕುಗಳ ಉಪಯೋಗದ ಬಗೆಗೂ ಈ ಸ್ಮಾರಕಶಿಲ್ಪಗಳು ಅರಿವನ್ನು ಮೂಡಿಸುತ್ತವೆ. ಅಷ್ಟೇ ಅಲ್ಲದೇ ಶಿಲ್ಪಿಯ ಕೈಬಳಕೆಯಿಂದ ಮೂಡಿಬಂದ ಶಿಲ್ಪಗಳ ಮುಖಭಾವ, ದೇಹದ ಭಂಗಿಗಳು ಅವರ ಭಾವಾಭಿವ್ಯಕ್ತಿಗಳನ್ನು ಶಿಲ್ಪಿಗಳ ಮುಖಾಂತರವಾಗಿ ನೋಡಬಹುದಾಗಿದೆ. ಮಾನವನ ಭಾವನೆಗಳನ್ನು ಈ ಸ್ಮಾರಕಶಿಲ್ಪಗಳು, ವಿವರಿಸುತ್ತವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**

1. ಯಾಳಗಿ ಮಹಾಲಿಂಗ., (ಸಂ) ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ, ಪು.ಸಂ.45.1997
2. ಗೋಪಾಲ.ಆರ್., ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.47.2006
3. ಹಣಜಿ ಬಿ.ಎಸ್., ಕಪ್ಪತ್ತಗಿರಿ, ಪು.ಸಂ.22.1975
4. ನಾಯಕ ಡಿ.ಬಿ., ಕರ್ನಾಟಕ ಗ್ರಾಮ ಚರಿತ್ರೆ ಕೋಶ: ಗದಗ ಜಿಲ್ಲೆ, ಪು.ಸಂ.110. 2017
5. ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲಾ ಶಾಸನ ಸೂಚಿ, SII, XI, Pt, II No 126-181-182 1975
6. ಬಾಲಸುಬ್ರಹ್ಮಣ್ಯ, ಸಿ. ಎಸ್.ವಾಸುದೇವನ್, ರಮೇಶ, ನಾಯಕ., ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಪು.ಸಂ.146.2007
7. ಕಿದಿಯೂರ ಹ.ರಾ., ನಮ್ಮ ಗದಗ-ಬೆಟಗೇರಿ, ಪು.ಸಂ.336.1975
8. ಗದಗ ಜಿಲ್ಲೆಯ ಅಂಕಿ ಅಂಶಗಳ ನೋಟ-1998-99, ಪು.ಸಂ.3, 6, 8, 9, 10.1998-99,

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.